ದಿನಾಂಕ: 11.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀಸವಾಲು **1** ರಿಂದ **4** ನೇ ಪ್ರತಿವಾದಿ ಪರ ಶ್ರೀ **ಬಿ.ಆರ್.ಎಲ್.** ವಕೀಲರಿಂದಃ

ದಾವಾ ಸ್ವತ್ತುಗಳು ಮೂಲತಃ ಪ್ರತಿವಾದಿಗಳಿಗೆ ಹೇಗೆ ಬಂತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಅವರ ತಾತನಿಂದ ಬಂದಿರುವ ಆಸ್ತಿ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿಗಳಿಗೆ ಅವರ ತಾತ ಕರೀಗೌಡನಿಂದ ಬಂತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಏನು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಪಹಣಿ ಎಂದು ಹೇಳುತ್ತಾರೆ. ಸಾಕ್ಷಿಗೆ ತನ್ನ ಪರ ಗುರುತಿಸಿದ ದಾಖಲಾತಿಗಳನ್ನು ತೋರಿಸಿ, ಅದರಲ್ಲಿ ಕರೀಗೌಡರ ಹೆಸರಿನಲ್ಲಿದ್ದ ಪಹಣಿಯನ್ನು ಗುರುತಿಸಲು ಆಗುತ್ತದಾ ಎಂದರೆ ಸಾಕ್ಷಿ ಓದಲು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

ದಾವೆ ಹೂಡಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ತಪಶೀಲು ಆಸ್ತಿ ಸಂ.1 ರಿಂದ 4 ರ ಸ.ನಂ. ಹಾಗೂ ಚೆಕ್ಕುಬಂಧಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಮರೆತಿದ್ದೇನೆ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.1 ರಿಂದ 4 ಮೂಲತಃ ಪ್ರತಿವಾದಿ 1 ಮತ್ತು 2 ರವರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ, ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ಎಲ್ಲಿವೆ ಎಂದರೆ ಸಾಕ್ಷಿ ಹೊಸೂರು @ ಪಾಲದಹೊಸೂರು @ ಗೇಟ್ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ಹೊಸೂರು @ ಪಾಲದಹೊಸೂರು @ ಗೇಟ್ ನಲ್ಲಿವೆ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಗಳು ಆಸ್ಪತ್ರೆ ಕಾವಲ್

ಗ್ರಾಮದಲ್ಲಿ ಇವೆ ಎಂದು ಬರೆಸಿದ್ದು, ನಾನು ಮೇಲೆ ಕೇಳಿದಾಗ ದಾವಾ ಆಸ್ತಿಗಳು ಹೊಸೂರು @ ಪಾಲದಹೊಸೂರು @ ಗೇಟ್ ನಲ್ಲಿವೆ ಎಂದು ಹೇಳಿದ್ದು, ಅವರೆಡರಲ್ಲಿ ಯಾವುದು ಸತ್ಯ ಎಂದರೆ ಸಾಕ್ಷಿ ಆಸ್ಪತ್ರೆ ಕಾವಲ್ ನಲ್ಲೇ ಇರುವುದು, ಅದನ್ನು ಹೊಸೂರು @ ಪಾಲದಹೊಸೂರು @ ಗೇಟ್ ಎಂದು ಸಹ ಕರೆಯಲಾಗುತ್ತದೆ ಎಂದು ಹೇಳುತ್ತಾರೆ.

ನಿಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಗಳು ಕರೀಗೌಡರಿಗೆ ಸಾಗುವಳಿ ಮುಖೇನ ಬಂದಿರುವುದಾಗಿ ಹೇಳಿದ್ದು, ಅದನ್ನು ನಿರೂಪಿಸಲು ಸಾಗುವಳಿ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.4 ನ್ನು ದಿಃ 22.03.2004 ರಲ್ಲಿ 1 ನೇ ಪ್ರತಿವಾದಿ ನರಸಪ್ಪಯ್ಯನ ಮಗ ಸುರೇಶ ರವರಿಂದ ಖರೀದಿ ಮಾಡಿದ್ದು, ಅದು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ.

ನಾನು 2000 ನೇ ಸಾಲಿನಲ್ಲಿ ಮದುವೆಯಾಗಿರುತ್ತೇನೆ. ಮದುವೆಯಾದ ಮೇಲೆ 6 ವರ್ಷಗಳ ಕಾಲ 1 ರಿಂದ 4 ನೇ ಪ್ರತಿವಾದಿಗಳ ಜೊತೆಯಲ್ಲೇ ವಾಸವಾಗಿರುತ್ತೇವೆ. ನೀವು ಕುರುಬರಹೊಸಹಳ್ಳಿ ಗ್ರಾಮದಲ್ಲಿ ವಾಸವಿದ್ದ ಬಗ್ಗೆ ಸರ್ಕಾರಿ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಏನು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಡಿತರ ಚೀಟಿ, ಚುನಾವಣೆ ಗುರುತಿನ ಚೀಟಿ ಇತ್ತು ಎಂದು ಹೇಳುತ್ತಾರೆ. ನೀವು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲದೇ ಇದ್ದರೂ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನನ್ನ ಯಜಮಾನರು 2010 ರಲ್ಲಿ ಹೊಸೂರಿನಲ್ಲಿ ಮೃತಪಟ್ಟಿರುತ್ತಾರೆ. ನನ್ನ ಯಜಮಾನರು ಬದುಕಿದ್ದಾಗ ವ್ಯವಸಾಯ ಹಾಗೂ ವ್ಯಾಪಾರ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಿಮ್ಮ ಯಜಮಾನರು ವ್ಯವಸಾಯ ಮಾಡಿಲ್ಲ, ನೀವು ಹಾಗೂ ಅವರು ವ್ಯಾಪಾರ ಮಾಡಿಕೊಂಡು ಬೇರೆ ಎಲ್ಲೋ ವಾಸವಾಗಿದ್ದು, ವ್ಯವಸಾಯ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ಅದೇ ಮನೆಯಲ್ಲಿದ್ದು ನಾನು ವ್ಯವಸಾಯ ಮಾಡಿದ್ದೇನೆ ಎಂದು ಹೇಳುತ್ತಾರೆ. ನನಗೆ ಈಗ 44 ವರ್ಷ ವಯಸ್ಸಾಗಿರುತ್ತದೆ. ನೀವು ಏನು ವ್ಯವಸಾಯ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಜೋಳ, ಹೊಗೆಸೊಪ್ಪು ಬೆಳೆ ಬೆಳೆಯುತ್ತಿದ್ದೇವು ಎಂದು ಹೇಳುತ್ತಾರೆ. ನೀವು ಈಗ ಎಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ ನನ್ನ ಗಂಡ ಮೃತಪಟ್ಟ ನಂತರ ತಾಯಿಯ ಮನೆಯಲ್ಲಿ ವಾಸ ಇದ್ದೇನೆ ಎಂದು ಹೇಳುತ್ತಾರೆ. ನೀವು ಯಾವ ವರ್ಷದಿಂದ ಯಾವ ವರ್ಷದವರೆಗೂ

ವ್ಯಾಪಾರ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಅವರು ಮೃತಪಡುವವರೆಗೂ ವ್ಯಾಪಾರ ಮಾಡುತ್ತಿದ್ದೇವು ಎಂದು ಹೇಳುತ್ತಾರೆ. ನಿಮ್ಮ ಯಜಮಾನರು ಏಲ್ಲೆಲ್ಲಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿ ಓರಿಸ್ಸಾಗೆ ಮಾತ್ರ ಹೋಗುತ್ತಿದ್ದರು ಎಂದು ಹೇಳುತ್ತಾರೆ.

ನನ್ನ ಮದುವೆ ದಿಃ05.06.2000 ಸಾಲಿನಲ್ಲಿ ಆಗಿರುತ್ತದೆ. ನೀವು ಮೈಸೂರಿನಲ್ಲಿ ಯಜಮಾನರೊಂದಿಗೆ ಮನೆ ಮಾಡಿಕೊಂಡು ಎಷ್ಟು ವರ್ಷಗಳ ಕಾಲ ಇದ್ದೀರಿ ಎಂದರೆ ಸಾಕ್ಷಿ 4 ವರ್ಷಗಳ ಕಾಲ ಎಂದು ಹೇಳುತ್ತಾರೆ. ನೀವು ಯಾವ ವರ್ಷದಿಂದ ಯಾವ ವರ್ಷದವರೆಗೂ ವಾಸ ಇದ್ದೀರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. 2000-04 ರಲ್ಲಿ ಇದ್ದಿರೋ, 2002-08 ರವರೆಗೂ ವಾಸ ಇದ್ದಿರೋ ಎಂದರೆ ಸಾಕ್ಷಿ ಗೊತ್ತಿಲ್ಲ, ಮದುವೆಯಾದ 6 ವರ್ಷಗಳ ನಂತರ ಅಲ್ಲಿಗೆ ಹೋಗಿದ್ದು ಎಂದು ಹೇಳುತ್ತಾರೆ. 6 ವರ್ಷಗಳ ಕಾಲ ಅತ್ತೆಯ ಮನೆಯಲ್ಲಪಿ ಇದ್ದಾಗ ಗಲಾಟೆ ಯಾರ ಮಧ್ಯೆ ಆಯಿತೆಂದರೆ ಸಾಕ್ಷಿ ನನ್ನ ಯಜಮಾನರು ಹಾಗೂ ಅವರ ತಂದೆಯ ನಡುವೆ ಎಂದು ಹೇಳುತ್ತಾರೆ. ನೀವು ಹೇಳಿದಂತೆ ಯಾವುದೇ ಗಲಾಟೆಯಾಗಿಲ್ಲ, ನೀವೇ ನಿಮ್ಮ ಗಂಡನ ಮೇಲೆ ಜಗಳಮಾಡಿಕೊಂಡು ತವರು ಮನೆಗೆ ಹೋಗಿರುತ್ತೀರಿ ಎಂದರೆ ಸರಿಯಲ್ಲ.

ನೀವು ಮೊಹನ್ ರವರೊಂದಿಗೆ ಮದುವೆಯಾದ ಕಾಲಕ್ಕೆ ಹೆಣ್ಣು ಕೇಳಲು ಯಾರ್ಯಾರು ಬಂದಿದ್ದರು ಎಂದರೆ ಸಾಕ್ಷಿ ಅತ್ತೆ, ಮಾವ, ಭಾವ, ಅತ್ತಿಗೆ, ಊರಿನ ಗ್ರಾಮಸ್ತರು ಬಂದಿದ್ದರು ಎಂದು ಹೇಳುತ್ತಾರೆ. ಒಟ್ಟು ಎಷ್ಟು ಜನ ಬಂದಿದ್ದರು ಎಂದರೆ ಸಾಕ್ಷಿ 25 ಜನ ಬಂದಿದ್ದರು ಎಂದು ಹೇಳುತ್ತಾರೆ. ನಿಮ್ಮ ಮದುವೆಯ ಕಾಲಕ್ಕೆ 25 ಜನ ಬಂದಿದ್ದರು ಎಂದು ಸುಳ್ಳಾಗಿ ಹೇಳುತ್ತಿದ್ದು, ನೀವು ಹಾಗೂ ಮೊಹನ್ ರವರು ಒಬ್ಬರಿಗೊಬ್ಬರು ಮೆಚ್ಚಿಕೊಂಡು ಇಬ್ಬರೇ ಮದುವೆಯಾಗಿರುತ್ತೀರಾ ಎಂದರೆ ಸರಿಯಲ್ಲ. ಮದುವೆ ಏಲ್ಲಿಯಾಯಿತು ಎಂದರೆ ಸಾಕ್ಷಿ ಮರಟಿಕೊಪ್ಪಲಿನಲ್ಲಿ ಎಂದು ಹೇಳುತ್ತಾರೆ. ಮಂಟಿಕೊಪ್ಪಲಿನಲ್ಲಿ ಮದುವೆಯಾದ ಬಗ್ಗೆ ಹಾಗೂ ಅತ್ತೆ, ಮಾವ, ಭಾವ, ಅತ್ತಿಗೆ, ಊರಿನ ಗ್ರಾಮಸ್ತರು ಸೇರಿದ್ದರು ಎಂದು ತೋರಿಸಲು ಭಾವಚಿತ್ರವನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಿಪಿ-1 ನ್ನು ಯಾರು ಹೇಳಿ ಬರೆಸಿದ್ದು ಎಂದರೆ ಸಾಕ್ಷಿ ನಾನೇ ಹೇಳಿ ಬರೆಸಿದ್ದು ಎಂದು ಹೇಳುತ್ತಾರೆ. ನಿಪಿ-1 ನ್ನು ತಾಲ್ಲೂಕು ಕಚೇರಿಯ ಬಳಿ ಬರೆಸಿರುತ್ತೇನೆ. ನಿಪಿ-1 ನ್ನು ಬರೆಸಲು ಪತ್ರವನ್ನು ನಾನೇ ತೆಗೆದುಕೊಂಡು ಹೋಗಿರುತ್ತೇನೆ. ನಿಪಿ-1 ರಂತೆ ನೋಟರಿಕೃತ ವಂಶವೃಕ್ಷ ಹಾಜರುಪಡಿಸಿದ್ದು, ಕಂದಾಯ ಇಲಾಖೆಯ ವತಿಯಿಂದ ನೀಡಲಾಗುವ ಆರ್.ಡಿ

ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಏನೋ ನನಗೆ ಗೊತ್ತಾಗುವುದಿಲ್ಲ, ಒಂದೇ ಬಾರಿ ತೆಗೆದುಕೊಂಡಿದ್ದೆ ಎಂದು ಹೇಳುತ್ತಾರೆ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಸರ್ಕಾರದಿಂದ ಸಾಗುವಳಿ ಮುಖೇನ ಜಮೀನನ್ನು ಮಂಜೂರು ಮಾಡಿಕೊಟ್ಟರೇ ಸದರಿ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆಂದರೆ ಸರಿ. ನಿಪಿ-2 ರಂತೆ ದಾವಾ ತಪಶೀಲು ಆಸ್ತಿ ನಂ.1, 1 ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆಂದರೆ ಸಾಕ್ಷಿಏನೋ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ನಂ.3, 2 ನೇ ಪ್ರತಿವಾದಿಗೆ ದಿಃ12.06.1995 ರಲ್ಲಿ ಎಲ್.ಎನ್.ಡಿ. ಕೆ.ಟಿ.ಟಿ.215/1993-94 ರಂತೆ ಮಂಜೂರಾಗಿರುತ್ತದೆಂದರೆ ಸಾಕ್ಷಿ ಏನಾಗಿದೆಯೋ ಗೊತ್ತಿಲ್ಲ, ತಂದು ಹಾಕಿದ್ದೇನೆ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ನಂ.2, ಎಲ್.ಎನ್.ಡಿ ಸಿ.ಆರ್. 79/1976-77 ರಂತೆ ದರಕಾಸ್ತು ಮುಖೇನ 1 ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ನಂ.4 ನ್ನು ನೀವು ಹಾಗೂ ಮೃತ ಮೋಹನ್ ರವರು ಮಾಡಿದ ಸಾಲದ ತಿರುವಳಿಗೆ 5 ಮತ್ತು 6 ನೇ ಪ್ರತಿವಾದಿಗಳಿಗೆ 1 ಮತ್ತು 2 ನೇ ಪ್ರತಿವಾದಿಗಳು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಮಾರಾಟ ಮಾಡಿರುವುದೇ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-19, ದಾವಾ ತಪಶೀಲು ಆಸ್ತಿ ನಂ.4 ಕ್ಕೆ ಸಂಬಂಧಿಸಿದ ಕ್ರಯ ಪತ್ರವಾಗಿದ್ದು, 1 ನೇ ಪ್ರತಿವಾದಿಗೆ ಸ್ವಯಾರ್ಜಿತ ಸ್ವತ್ತಾಗಿದ್ದು, ಅದನ್ನು ಬ್ಯಾಂಕಿನಲ್ಲಿ ಮಾಡಿದ ಸಾಲ ಹಾಗೂ ಜನಗಳಿಂದ ಮಾಡಿದ ಸಾಲದ ತಿರುವಳಿಗಾಗಿ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ.

ದಾವಾ ತಪಶೀಲು ಆಸ್ತಿ ನಂ.4 ನ್ನು, 1 ನೇ ಪ್ರತಿವಾದಿ 4 ಎಕರೆ ಪೈಕಿ 2 ಎಕರೆ ಜಮೀನನ್ನು ಮೂಲ ಮಾಲೀಕರಾದ ಶಿವಮ್ಮ ಕೋಂ ಬಸವಣ್ಣ ರವರಿಂದ ಖರೀದಿಸಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ನಂ.5, 1 ನೇ ಪ್ರತಿವಾದಿಯವರ ಸ್ವಯಾರ್ಜಿತ ಸ್ವತ್ತಾಗಿದ್ದು, ಅದರಲ್ಲಿನ 16X16 ಅಳತೆಯ ಬ್ಯಾರನ್ ಪೈಕಿ 13X13 ಅಳತೆಯ ಬ್ಯಾರನ್ ನಂ.1-420-033 ನ್ನು ಕಲ್ಲೇಗೌಡ ರವರಿಗೆ ಮಾರಾಟ ಮಾಡಿ, 13X13 ಅಳತೆಯ ಸಿಂಗಲ್ ಬ್ಯಾರನ್ ನ್ನು 1 ನೇ ಪ್ರತಿವಾದಿ ಉಳಿಸಿಕೊಂಡಿರುತ್ತಾರೆಂದರೆ ಸರಿ. ಉಳಿಕೆ 16X16 ಅಡಿಯ ಬ್ಯಾರನ್ ಮನೆ 3 ನೇ ಪ್ರತಿವಾದಿಯ ಬ್ಯಾರನ್ ಮನೆ ಎಂದರೆ ಸರಿಯಲ್ಲ.

2 ಮತ್ತು 3 ನೇ ವಾದಿಗಳಿಗೆ ಈಗ ಎಷ್ಟು ವಯಸ್ಸಾಗಿದೆ ಎಂದರೆ ಸಾಕ್ಷಿ 3 ನೇ ವಾದಿಗೆ

20 ವರ್ಷ ಹಾಗೂ 2 ನೇ ವಾದಿಗೆ 23 ವರ್ಷ ಎಂದು ಹೇಳುತ್ತಾರೆ. 2 ಮತ್ತು 3 ನೇ ವಾದಿಗಳು ಈಗ ವಯಸ್ಕರು ಎಂದು ಹೇಳುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ 2 ಮತ್ತು 3 ನೇ ವಾದಿಗಳು ವಯಸ್ಕರಾಗಿದ್ದು, ಅವರ ಪರವಾಗಿ ಪ್ರತಿನಿಧಿಸುತ್ತಿರುವುದಾಗಿ ಹೇಳಿ ಬರೆಸಿ ಹಾಕಿದ್ದೀರಾ ಎಂದರೆ ಸಾಕ್ಷಿ ಹಾಕಿದ್ದೇನೆ ಎಂದು ಹೇಳುತ್ತಾರೆ. ನೀವು ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿಲ್ಲ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ತಪಶೀಲು ಆಸ್ತಿ ನಂ.4 ನ್ನು ಪ್ರತಿವಾದಿ 1 ರಿಂದ 4 ರವರು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಚಾರ ನಿಮ್ಮ ಗಮನಕ್ಕೆ ಯಾವಾಗ ಬಂತು ಎಂದರೆ ಸಾಕ್ಷಿ ಮಾರಾಟ ಮಾಡಿ 1 ವರ್ಷದ ನಂತರ ಗಮನಕ್ಕೆ ಬಂತು ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ನಂ.4 ನ್ನು ಮಾರಾಟ ಮಾಡಿ 8 ವರ್ಷವಾಗಿದೆಯಾ ಎಂದರೆ ಸಾಕ್ಷಿ ಜಾಸ್ತಿಯಾಗಿದೆ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ನಂ.4 ನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿ, ಅವರ ಹೆಸರಿಗೆಯಾದ ಖಾತೆಯ ಸಂಬಂಧ ನೀವು ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಪ್ರಶ್ನೆ ಮಾಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನೀವು 1 ರಿಂದ 4 ನೇ ಪ್ರತಿವಾದಿಗಳನ್ನು ಭಾಗ ಕೇಳಲು ಯಾವ ದಿನಾಂಕ, ತಿಂಗಳು, ವರ್ಷದಂದು ಕೇಳಿರುತ್ತೀರಿ ಎಂದರೆ ಸಾಕ್ಷಿ ನನ್ನ ಯಜಮಾನರು ಮೃತಪಟ್ಟ ವರ್ಷ ಎಂದರೆ 2010 ರಲ್ಲೇ ಕೇಳಿರುತ್ತೇನೆ ಎಂದು ಹೇಳುತ್ತಾರೆ. ಭಾಗ ಕೇಳಲು ಯಾರ್ಯಾರು ಹೋಗಿದ್ದೀರಿ ಎಂದರೆ ಸಾಕ್ಷಿ ನನ್ನ ತಾಯಿ ಮನೆ ಕಡೆಯವರು ಹಾಗೂ ನಾನು ಹೋಗಿದ್ದೆ ಎಂದು ಹೇಳುತ್ತಾರೆ. ಭಾಗ ಕೇಳಲು ಹೋದಾಗ ನನಗೂ ಮತ್ತು ನನ್ನ ಮಕ್ಕಳಿಗೂ ಹೊಡೆದು ಹೊರ ದಬ್ಬಿದರು ಎಂದು ಬರೆಸಿದ್ದು, ಅದರ ಸಂಬಂಧ ದೂರನ್ನು ದಾಖಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಹಾಗೆ ಮನೆಗೆ ಹೋದೆವು ಎಂದು ಹೇಳುತ್ತಾರೆ. ನೀವು ಯಾವುದೇ ಭಾಗವನ್ನು ಕೇಳಲು ಹೋಗಿಲ್ಲ, 1 ರಿಂದ 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ವಕೀಲರಿಗೆ ಸುಳ್ಳು ಮಾಹಿತಿಯನ್ನು ನೀಡಿ, ಬರೆಸಿ ಹಾಕಿರುತ್ತೀರಾ ಎಂದರೆ ಸರಿಯಲ್ಲ.

ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡಿರುತ್ತೇವೆ ಎಂದು ಹೇಳಿ ಬರೆಸಿದ್ದು, ಎಷ್ಟು ಜನ ನ್ಯಾಯ ಪಂಚಾಯಿತಿ ಮಾಡುವ ಕಾಲಕ್ಕೆ ಇದ್ದರು ಎಂದರೆ ಸಾಕ್ಷಿ 15-20 ಜನ ಇದ್ದರು ಎಂದು ಹೇಳುತ್ತಾರೆ. ನ್ಯಾಯ ಪಂಚಾಯಿತಿಯಲ್ಲಿ ಯಾರ್ಯಾರು ಇದ್ದರು ಎಂದರೆ ಸಾಕ್ಷಿ ಜವರೇಗೌಡ, ಪುಟ್ಟಸೋಮಯ್ಯ, ನಾಗಣ್ಣ, ಪಾಪೇಗೌಡ ಮತ್ತು ಉಳಿದವರ ಹೆಸರು

ಮರೆತುಹೋಗಿರುತ್ತದೆ ಎಂದು ಹೇಳುತ್ತಾರೆ. ಸದರಿಯವರನ್ನು ಸಾಕ್ಷಿ ಮಾಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 1976 ರಲ್ಲಿ, 1 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ನಂ.1 ಮಂಜೂರಾಗಿದ್ದು, ಆಗ ನಿಮ್ಮ ಯಜಮಾನರು ಇನ್ನು ಜನಿಸಿರಲಿಲ್ಲ ಎಂದರೆ ಸರಿಯಲ್ಲ. 1995-96 ರಲ್ಲಿ, 2 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ನಂ.3 ಮಂಜೂರಾಗಿದ್ದು, ಆಗ ನಿಮ್ಮ ಯಜಮಾನರು ಬಾಲ್ಯಾವಸ್ಥೆ ಇದ್ದರು ಎಂದರೆ ಸಾಕ್ಷಿ ಆವಾಗಲೂ ಅವರು ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತಾರೆ.

ನಿಮ್ಮ ಯಜಮಾನರು ಎಲ್ಲಿಯವರೆಗೂ ವಿದ್ಯಾಭ್ಯಾಸ ಮಾಡಿದ್ದಾರೆಂದರೆ ಸಾಕ್ಷಿ 3 ನೇ ತರಗತಿವರೆಗೂ ಓದಿದ್ದಾರೆ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ನಂ.1 ರಿಂದ 4, 1 ಮತ್ತು 2 ನೇ ಪ್ರತಿವಾದಿಗಳ ಸ್ವಯಾರ್ಜಿತ ಸ್ವತ್ತುಗಳಾಗಿದ್ದು, ನಿಮಗಾಗಲೀ, ಉಳಿದ ವಾದಿಗಳಿಗಾಗಲೀ ಹಾಗೂ 3 ರಿಂದ 5 ನೇ ಪ್ರತಿವಾದಿಗಳಿಗಾಗಲೀ ಯಾವುದೇ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನೀವು ದಾವೆಯಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹರಲ್ಲದೇ ಇರುವುದರಿಂದ ದಾವೆ ವಜಾ ಮಾಡಲು ಸೂಕ್ತವಾಗಿದೆ ಎಂದರೆ ಸರಿಯಲ್ಲ.

<u>ಪಾಟೀಸವಾಲು **5** ಮತ್ತು **6** ನೇ ಪ್ರತಿವಾದಿ ಪರ ಶ್ರೀ ಬಿ.ಎ.ಎಸ್. ವಕೀಲರಿಂದಃ</u>

ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.